ಪಿ.ಡಬ್ಲ್ಯು. 1

(ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಇಂದು ದಿನಾಂಕ 01-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ಬಿ.ಎನ್. ವಕೀಲರಿಂದಃ</u>**

4 ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ. 53 ಎಂದು, 9 ಔಷಧಿ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ. 54 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ.ಜಿ.ಹೆಚ್. ವಕೀಲರಿಂದ</u>**

ನಿ.ಪಿ.53 ಮತ್ತು ನಿ.ಪಿ.54 ಆಸ್ಪತ್ರೆಯಿಂದ ಬಂದ ನಂತರ ನಮ್ಮ ಮನೆಯಲ್ಲಿಯೇ ಇದ್ದವು. ನನ್ನ ಮುಖ್ಯ ವಿಚಾರಣೆಯಾದ ನಂತರ ನಾನು ಚಿಕಿತ್ಸೆ ತೆಗೆದುಕೊಂಡಂತಹ ಔಷಧಿ ಚೀಟಿ ಮತ್ತು ಬಿಲ್ಲುಗಳು ನಿ.ಪಿ.53 ಮತ್ತು ನಿ.ಪಿ.54 ಆಗಿರುತ್ತವೆ. ನಿ.ಪಿ.53 ಮತ್ತು ನಿ.ಪಿ.54 ನಾನು ಅಪಘಾತ ಆದ ನಂತರ ಚಿಕಿತ್ಸೆಗೆ ಸಂಬಂಧಪಟ್ಟಂತಹ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ